ಅನುಬಂಧ–೨

ಜಿಲ್ಲಾವಾರು ವಿದ್ಯಾರ್ಥಿ ನಿಲಯಗಳು ಸರ್ಕಾರಿ ಕಟ್ಟಡದಲ್ಲಿ ನಡೆಯುತ್ತಿರುವ ವಿವರಣೆ ಈ ರೀತಿ ಇದೆ.

	ಜಿಲ್ಲೆ	ಪದವಿಪೂರ್ವ ಸರ್ಕಾರಿ ಕಟ್ಟಡದಲ್ಲಿರುವ ನಿಲಯಗಳು	ಪದವಿ ನಂತರ ಸರ್ಕಾರಿ ಕಟ್ಟಡದಲ್ಲಿರುವ ನಿಲಯಗಳು
೧	ಬೆಂಗಳೂರು	೭	೨
೨	ತುಮಕೂರು	೪	—
೩	ಕೋಲಾರ	೭	೧
೪	ಚಿತ್ರದುರ್ಗ	೬	—
೫	ಶಿವಮೊಗ್ಗ	೧೧	—
೬	ಮೈಸೂರು	೧೧	—
೭	ಹಾಸನ	೧೦	—
೮	ಮಂಡ್ಯ	೭	—
೯	ಕೊಡಗು	೮	—
೧೦	ಚಿಕ್ಕಮಗಳೂರು	೫	—
೧೧	ದಕ್ಷಿಣ ಕನ್ನಡ	೧೫	—
೧೨	ಗುಲಬರ್ಗ	೧೩	—
೧೩	ರಾಯಚೂರು	೯	—
೧೪	ಬೀದರ್	೪	—
೧೫	ಬಳ್ಳಾರಿ	೪	—
೧೬	ಬೆಳಗಾಂ	೭	—
೧೭	ಬಿಜಾಪುರ	೫	—
೧೮	ಧಾರವಾಡ	೬	—
೧೯	ಉತ್ತರ ಕನ್ನಡ	೭	—
		೧೪೬	೩

ಮಂಗಳೂರು ಅಸಿಸ್ಟೆಂಟ್ ಲೇಬರ್ ಕಮೀಷನರ್ ಕಚೇರಿ ದುರವಸ್ಥೆಯ ಬಗ್ಗೆ

೨೩೪ (೧೫೮) ಶ್ರೀ ವಿ. ಧನಂಜಯಕುಮಾರ್ (ಮಂಗಳೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕಾರ್ಮಿಕ ಮತ್ತು ಪಕ್ಷೇತರ ಸಚಿವರುಗಳು ದಯವಿಟ್ಟು ಉತ್ತರಿಸುವರೆ :—

ಅ) ಮಂಗಳೂರು ಅಸಿಸ್ಟೆಂಟ್ ಲೇಬರ್ ಕಮೀಷನರ್ ಕಚೇರಿ ದುರವಸ್ಥೆಯಲ್ಲಿ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೆ?

ಆ) ಈ ಬಗ್ಗೆ ಸರಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಅಜೀಜ್ ಸೇಠ್ (ಕಾರ್ಮಿಕ ಮತ್ತು ಪಕ್ಷ ಮಂತ್ರಿಗಳು).—

ಅ) ಹೌದು.

ಆ) ಇದರ ಬಗ್ಗೆ ಮಾನ್ಯ ಕಾರ್ಮಿಕ ಮಂತ್ರಿಗಳ ಸಮ್ಮುಖದಲ್ಲಿ ದಿನಾಂಕ ೧೨-೪-೧೯೮೩ ರಂದು ಸಭೆಯೊಂದರಲ್ಲಿ ಚರ್ಚಿಸಲಾಗಿದೆ.

ಕಟ್ಟಡವನ್ನು ನಿರ್ಮಿಸಲೋಸುಗ ಮಂಗಳೂರಿನ ಮೇರಿ ಹಿಲ್ ಎಂಬಲ್ಲಿ ಸ್ಥಳಾವಕಾಶವನ್ನು ಮಾಡಲಾಗಿದೆ. ಆದುದರಿಂದ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

ಮೋಟಾರು ವಾಹನಗಳ ತೆರಿಗೆಯಲ್ಲಿ ರಸ್ತೆ ರಿಪೇರಿ ಬಗ್ಗೆ ಸ್ಥಳೀಯ ಸಂಸ್ಥೆಗಳಿಗೆ ಕೊಡುವ ಅನುದಾನ

೨೩೫೫ (೧೫೯೯) ಶ್ರೀ ವಿ. ಧನಂಜಯ ಕುಮಾರ್ (ಮಂಗಳೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಮೋಟಾರು ವಾಹನಗಳ ಮೇಲಿನ ತೆರಿಗೆ ವಸೂಲು ಮಾಡಿರುವ ಮೊತ್ತದಿಂದ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ರಸ್ತೆಗಳ ರಿಪೇರಿಗೆ ಕೊಡುವ ಅನುದಾನದ ಅಂಶವೆಷ್ಟು?

ಆ) ಈ ಅನುದಾನವು ರಸ್ತೆಗಳ ರಿಪೇರಿಗೆ ಸಾಕಾಗದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಈ ರೀತಿ ಕೊಡುತ್ತಿರುವ ಅನುದಾನದ ಅಂಶವನ್ನು ಹೆಚ್ಚಿಸುವ ಆಲೋಚನೆ ಸರಕಾರಕ್ಕೆ ಇದೆಯೇ?

ಈ) ಹಾಗಿದ್ದಲ್ಲಿ ಹಿಂದಿನ ವರ್ಷಗಳಿಗೂ ಅನ್ವಯಿಸುವಂತೆ ಈ ಹಣ ಕೊಡಲಾಗುತ್ತದೆಯೇ?

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಸ್ಥಳೀಯ ಮಂಡಳಿಗೆ ಕೊಡಲಾಗುತ್ತಿರುವ ಪರಿಹಾರಧನವು ಆಯಾ ಸ್ಥಳೀಯ ಮಂಡಳಿಗಳಿಗೆ ಮೋಟಾರು ವಾಹನ ತೆರಿಗೆ ಅಥವಾ ಶುಲ್ಕದಿಂದ ಬರತಕ್ಕ ವಾರ್ಷಿಕ ಆದಾಯದ ಅಂದರೆ ೩೧ನೇ ಮಾರ್ಚಿ ೧೯೫೭ನೇ ಇಸವಿಯ ಹಿಂದಿನ ಮೂರು ವರ್ಷಗಳ ಮೊತ್ತದ ಸಮಭಾಗದ ಸರಾಸರಿ ಪಾಯಕ್ಕೆ ಪರಿಯಾಗಿ ಕರ್ನಾಟಕ ಮೋಟಾರು ವಾಹನ ತೆರಿಗೆಯ ೧೯೫೭ನೇ ಅಧಿನಿಯಮ ೨೦ರ ಪ್ರಕಾರ ನಿಗದಿ ಪಡಿಸಲಾಗಿದೆ. ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟನ್ನು ಕೊಡುತ್ತಿರುವುದು ಎಂಬುದನ್ನು ಇದಕ್ಕೆ ಲಗತ್ತಿಸಿರುವ ಅನುಬಂಧ "ಎ" ನಲ್ಲಿ ತೋರಿಸಲಾಗಿದೆ.

ಆ) ಹೌದು.

ಇ) ಸರ್ಕಾರ ಈ ವಿಚಾರವನ್ನು ಪರಿಶೀಲಿಸುತ್ತಿದೆ.

ಈ) ಇಲ್ಲ.